**ಓಂ ಶಾಂತಿ, ಬಾಪ್ ದಾದಾ. ಅವ್ಯಕ್ತ ಮುರಳಿ 23-01-1969.** (ओम शान्ति, बापदादा. अव्यक्त मुरली 23-01-1969)

***ಅಸ್ಥಿ(ಮೂಳೆ)ಗಳು ಸ್ಥಿತಿಯ ಸ್ಮೃತಿಯನ್ನು ತಂದುಕೊಡುತ್ತವೆ***

(अस्थियाँ हैं – स्थिति की स्मृति दिलाने वाली)

ನಾನು ಇಂದು ಮಕ್ಕಳನ್ನು ಅವ್ಯಕ್ತ ರೂಪದಲ್ಲಿ ಮಿಲನ ಮಾಡಲು ಬಂದಿರುವೆನು. ನನ್ನ ಮಕ್ಕಳೆಲ್ಲರಲ್ಲಿಯೂ ಅವ್ಯಕ್ತ ಸ್ಥಿತಿಯಲ್ಲಿರುವವರೇ ಇದನ್ನು ಅರಿಯಬಲ್ಲರು. ತಾವೆಲ್ಲರೂ ಅವ್ಯಕ್ತ ರೂಪದಲ್ಲಿ ಸ್ಥಿತರಾಗಿ ಯಾರನ್ನು ನೋಡುತ್ತಿರುವಿರಿ? ವ್ಯಕ್ತ ರೂಪವನ್ನೋ? ಅಥವಾ ಅವ್ಯಕ್ತ ರೂಪವನ್ನೋ? ತಾವು ವ್ಯಕ್ತವಾಗಿರುವಿರೋ ಅಥವಾ ಅವ್ಯಕ್ತವಾಗಿರುವಿರೋ? ಒಂದು ವೇಳೆ ವ್ಯಕ್ತದಲ್ಲಿ ನೋಡಿದ್ದಾದರೆ ತಂದೆಯನ್ನು ನೋಡಲು ಸಾಧ್ಯವಾಗುವುದಿಲ್ಲ. ಇಂದು ಅವ್ಯಕ್ತ ವತನದಿಂದ ಮಿಲನ ಮಾಡಲು ಬಂದಿರುವೆನು. ಅವ್ಯಕ್ತ ವತನದಲ್ಲಿ ಶಬ್ದವಿಲ್ಲ ಆದರೆ ಇಲ್ಲಿ ಶಬ್ದದಲ್ಲಿ ಬಂದಿದ್ದೇನೆ. ತಮ್ಮೆಲ್ಲರಲ್ಲಿ ಯಾವ ಸಂಕಲ್ಪ ನಡೆಯುತ್ತಿದೆ? ಈಗ ಇದು ಅವ್ಯಕ್ತ ಮಿಲನವಾಗಿದೆ. ಕಲ್ಪದ ಹಿಂದಿನಂತೆ ಮಕ್ಕಳೊಂದಿಗೆ ಆತ್ಮಿಕ ಸಂಭಾಷಣೆ ನಡೆದಿದೆ. ಈ ರೀತಿಯ ಸಂಭಾಷಣೆಗಾಗಿ ಮಧುರ ಶಿವ ತಂದೆ ಮಕ್ಕಳನ್ನು ಭೇಟಿಯಾಗಲು ಕಳುಹಿಸಿದ್ದಾರೆ. ಕಲ್ಪದ ಹಿಂದೆ ಇದ್ದವರು ಈಗಲೂ ಇದ್ದಾರೆ. ಎರಡು-ಮೂರು ದಿನಗಳ ಹಿಂದೆ ಮಧುರಾತಿ ಮಧುರ ತಂದೆಯೊಂದಿಗೆ ಸಂಭಾಷಣೆ ನಡೆದಿತ್ತು. ಸಂಭಾಷಣೆ ಏನಾಗಿತ್ತು ಗೊತ್ತೇ? ವತನದ ಅನುಭವ ಮಾಡಲು ಸಿದ್ಧರಾಗಿರುವಿರಾ? ಎಂದು ಬಾಬಾ ಕೇಳಿದರು ಏನು ಉತ್ತರ ಕೊಟ್ಟಿರಬಹುದು? ತಂದೆಯ ಆಜ್ಞೆಯಂತೆ ನಡೆಯುತ್ತೇವೆ. ಎಲ್ಲಿ ಕುಳಿತುಕೊಳ್ಳಲು ಹೇಳುವರು ಅಲ್ಲಿ ಕುಳಿತುಕೊಳ್ಳುತ್ತೇವೆ, ಯಾವ ರೂಪದಲ್ಲಿ ಕೂರಿಸುತ್ತಾರೆಯೋ ಆ ಸ್ಥಿತಿಯಲ್ಲಿ ಕುಳಿತುಕೊಳ್ಳುತ್ತೇವೆ ಎಂದು ಹೇಳಿದೆ.

ಬಾಪ್ ದಾದ ಏಕೆ ಅನುಮತಿಯನ್ನು(ಶರೀರವನ್ನು ಬಿಡಲು) ಪಡೆಯಲಿಲ್ಲವೆಂಬ ಸಂಕಲ್ಪ ಮಕ್ಕಳಲ್ಲಿ ನಡೆದಿರಬಹುದು. ಶಿವ ತಂದೆಗೂ ಅದನ್ನೇ ಕೇಳಿದೆ ಎಲ್ಲಾ ಮಕ್ಕಳನ್ನು ಕುಳ್ಳರಿಸಿ ಅನುಮತಿಯನ್ನು ಕೇಳಿದ್ದರೆ ಕೊಡುತ್ತಿದ್ದರೇ? ಎಂದು ಶಿವ ತಂದೆ ಕೇಳಿದರು. ತಾವು ಸಹ ಮಕ್ಕಳನ್ನು ನೋಡಿ, ಸೇವೆಯನ್ನು ನೋಡಿ ಮಕ್ಕಳ ಸ್ನೇಹದಲ್ಲಿ ಬರಬಹುದಾಗಿತ್ತು. ಆದ್ದರಿಂದ ತಂದೆ ಈಗ ಮಾಡಿದ್ದೇ ನಾಟಕಕ್ಕೆ ಭವಿಷ್ಯವಾಗಿದೆ. ವ್ಯಕ್ತ ರೂಪದಲ್ಲಿ ಅಲ್ಲದಿದ್ದರೂ ಅವ್ಯಕ್ತ ರೂಪದಲ್ಲಿ ಮಿಲನ ಮಾಡುತ್ತಿರುವಿರಿ. ಸೇವೆಯಲ್ಲಿ ವೃದ್ಧಿ ಅದೇ ರೀತಿ ಇದೆ, ಮಕ್ಕಳ ನೆನಪು ಅದೇ ರೀತಿ ಇದೆ ಆದರೆ ಅಂತರವೇನೆಂದರೆ, ಅದು ವ್ಯಕ್ತದಲ್ಲಿ ಅವ್ಯಕ್ತವಾಗಿತ್ತು ಇದು ಸಂಪೂರ್ಣ ಅವ್ಯಕ್ತವಾಗಿದೆ. ಯಾರು ಕಣ್ಣುಗಳಿಂದ ಮಿಲನ ಮಾಡುವುದನ್ನು ಅರಿತಿದ್ದಾರೆಯೋ ಅವರು ಈ ಸ್ವಲ್ಪ ಸಮಯದ ಮಿಲನದಲ್ಲಿ ತಮ್ಮಪ್ರತಿ ಶಿಕ್ಷಣ ಮತ್ತು ಸೂಚನೆಗಳನ್ನು ಪಡೆದುಕೊಳ್ಳುವರು. ತಾವೆಲ್ಲರೂ ವತನಕ್ಕಂತೂ ಬರಲೇಬೇಕು, ಮಕ್ಕಳೊಂದಿಗೆ ಮಿಲನ ಮಾಡಲು ಪ್ರತಿಕ್ಷಣವೂ ಎಲ್ಲಾ ಸಮಯದಲ್ಲಿ ಸಿದ್ಧರಾಗಿರುತ್ತೇವೆ. ಮಕ್ಕಳ ಬುದ್ಧಿ ಯೋಗ ಎಷ್ಟು ಸ್ಪಷ್ಟವಾಗಿದೆಯೋ, ಅದರ ಅನುಸಾರವಾಗಿ ಅವ್ಯಕ್ತ ಮಿಲನದ ಅನುಭವ ಮಾಡಬಹುದು. ಶಕ್ತಿ ಸ್ವರೂಪದಲ್ಲಿ ಸ್ಥಿತರಾಗಿದ್ದೀರಾ? (ದೀದಿ ಅವರೊಂದಿಗೆ) ಮೊದಲು ಹೇಗೆ ಜೊತೆಯಾಗಿದ್ದೆವೋ ಹಾಗೆಯೇ ಇದ್ದೇವೆ, ಬೇರೆಯಾಗಿಲ್ಲ. ಈಗ ಶಕ್ತಿ ಸ್ವರೂಪದ ಪಾತ್ರವನ್ನು ಪ್ರತ್ಯಕ್ಷದಲ್ಲಿ ತೋರಿಸಬೇಕು. ತಂದೆಯಿಂದ ಪಡೆದ ಶಿಕ್ಷಣವನ್ನು ನಿಜ ಜೀವನದಲ್ಲಿ ತಂದು ತೋರಿಸಬೇಕು ಶಕ್ತಿಸೇನೆ ಬಹಳ ಇದೆ, ಈಗ ಸಂಪೂರ್ಣ ಶಕ್ತಿ ಸ್ವರೂಪರಾಗಬೇಕು. ಇಲ್ಲಿಯವರೆಗೂ ಮಕ್ಕಳು ತಂದೆಯ ಸ್ನೇಹದಲ್ಲಿ ನಡೆಯುತ್ತಿದ್ದರು. **ಈಗ ತಂದೆಯಿಂದ ಪಡೆದ ಶಕ್ತಿಯಿಂದ ಅನ್ಯರನ್ನು ಶಕ್ತಿಶಾಲಿಯನ್ನಾಗಿ ಮಾಡುವವರೇ ತಂದೆಯ ಜೊತೆ ಸ್ನೇಹಿಯಾಗಿ ಅಂತ್ಯದವರೆಗೆ ಇರುತ್ತಾರೆ**.

ಈಗ ಮಧುರಾತಿ ಮಧುರ ತಂದೆ ಮಕ್ಕಳೆಲ್ಲರ ದೃಶ್ಯವನ್ನು ತೋರಿಸುತ್ತಿದ್ದರು. ತಾವು ಅಸ್ಥಿಗಳನ್ನು ಎತ್ತುತ್ತಿದ್ದೀರಿ. ಅಸ್ಥಿಗಳನ್ನು ನೋಡಬೇಡಿರಿ ಸ್ಥಿತಿಯನ್ನು ನೋಡಿರಿ. ಈ ಅಸ್ಥಿಗಳು ಸ್ಥಿತಿಸ್ವರೂಪವಾಗಿವೆ. ಒಂದೊಂದು ರೋಮದಲ್ಲಿ ಸ್ಥಿತಿಯಿದೆ. ಸ್ಥೂಲವಾಗಿ ಈ ಅಸ್ಥಿಗಳನ್ನು ಇಡಲಾಗಿದೆ. ಆದರೆ ಇದರಲ್ಲಿ ಭಕ್ತಿ ಮಾರ್ಗದ ಅರ್ಥವನ್ನು ತೆಗೆದುಕೊಳ್ಳಬಾರದು. ಈ

ಅಸ್ಥಿಗಳಲ್ಲಿ ಯಾವ ಸ್ಥಿತಿ ಇದೆಯೋ ಸದಾ ಅದನ್ನೇ ನೋಡಬೇಕು. ಸಾಧಾರಣ ಮನುಷ್ಯರಿಗೆ ಈ ಮಾತುಗಳ ಅರ್ಥ ತಿಳಿಯುವುದಿಲ್ಲ. ಮಕ್ಕಳ ಸ್ನೇಹವಿದೆ ಮತ್ತು ಸದಾ ಇರುವುದು 21 ಜನ್ಮಗಳ ವರೆಗೆ ಇರುವುದು. ತಾವೆಲ್ಲರೂ ಸತ್ಯಯುಗದ ಪ್ರಪಂಚಕ್ಕೆ ಜೊತೆಗೆ ಬರುವುದಿಲ್ಲವೇ? ಜೊತೆಗೆ ರಾಜ್ಯವನ್ನು ಪಡೆಯುವುದಿಲ್ಲವೇ? ಜನ್ಮಜನ್ಮಾಂತರದವರೆಗೂ ಜೊತೆ ಇದ್ದೇವೆ ಮತ್ತು ಇರುತ್ತೇವೆ. ಈಗಲೂ, ತಂದೆ ಇದ್ದಾರೆ, ದಾದಾ ಇಲ್ಲ ಅಥವಾ ದಾದಾ ಇದ್ದಾರೆ, ತಂದೆ ಇಲ್ಲ ಎಂದು ತಿಳಿಯಬೇಡಿರಿ. ನಾವಿಬ್ಬರು ಒಂದು ಕ್ಷಣವೂ ಅಗಲುವುದಿಲ್ಲ. ಇದೇ ರೀತಿ ತಮ್ಮನ್ನು ತ್ರಿಮೂರ್ತಿ ಎಂದು ತಿಳಿಯಿರಿ. ಆದ್ದರಿಂದ ತ್ರಿಮೂರ್ತಿ ಬ್ಯಾಡ್ಜನ್ನು ಸದಾ ಜೊತೆಗೆ ಇಟ್ಟುಕೊಳ್ಳಿರಿ. ತ್ರಿಮೂರ್ತಿಯ ಸ್ಥಿತಿ ಪ್ರಸಿದ್ಧವಾಗಿದೆ. ಬ್ರಹ್ಮ, ವಿಷ್ಣು ಮತ್ತು ಶಂಕರನನ್ನು ನೋಡಿದಾಗ, ತಮ್ಮ ತ್ರಿಮೂರ್ತಿ ಎಂದರೆ, ತಮ್ಮ ಸ್ವರೂಪದ ಮತ್ತು ಬಾಪ್ ದಾದಾರವರ ನೆನಪು ಇರಬೇಕು. ಇದರಲ್ಲಿಯೇ ಮಕ್ಕಳ ಕಲ್ಯಾಣವಿದೆ. ಕಲ್ಯಾಣಕಾರಿ ತಂದೆ ಏನು ಹೇಳುವರೋ, ಏನನ್ನು ಮಾಡಿಸುವರೋ, ಅದರಲ್ಲಿ ಕಲ್ಯಾಣವಿದೆ. ಒಂದೊಂದು ಮಹಾವಾಕ್ಯದಲ್ಲಿ ಒಂದೊಂದು ದೃಷ್ಟಿಯಲ್ಲಿ ಕಲ್ಯಾಣವಿದೆ. ಆದರೆ ಕೆಲವು ಅನನ್ಯ ಮತ್ತು ಮಹಾರಥಿ ಮಕ್ಕಳು ಇದನ್ನು ಗುರುತಿಸುವರು. ಈಗ ತಾವು ಇಷ್ಟೇ ಶೀಘ್ರವಾಗಿ ಕರ್ಮಾತೀತ ಸ್ಥಿತಿಯಲ್ಲಿ ಸ್ಥಿತರಾಗುವ ಪುರುಷಾರ್ಥವನ್ನು ಮಾಡಿ. ಇಲ್ಲಿ ಹೇಗೆ ಪ್ರತಿ ಸಮಯವನ್ನು ತಂದೆಯ ಜೊತೆಗೆ ಕಳೆಯುತ್ತಿದ್ದೀರೋ ಹಾಗೆಯೇ ಪ್ರತಿ ಕರ್ಮದಲ್ಲಿ ಎಲ್ಲಾ ಕಾಲದಲ್ಲಿಯೂ ತಂದೆಯನ್ನು ತಮ್ಮೊಂದಿಗೆ ಇಟ್ಟುಕೊಳ್ಳಿ. ಮಕ್ಕಳೇ ಇದೇ ಪಾಠವನ್ನು ನೆನಪಿಟ್ಟುಕೊಳ್ಳಿ, ಎಂದಿಗೂ ಮರೆಯಬೇಡಿ. ಸಂಬಂಧ, ಸ್ನೇಹ, ಸ್ಮೃತಿ ಸ್ವರೂಪದ ಜೊತೆ-ಜೊತೆಗೆ ಸರಳತೆಯ ಸ್ವರೂಪ, ಸಮರ್ಪಣೆಯ ಬುದ್ಧಿಯಿಂದ, ಪರಸ್ಪರ ಸಹಯೋಗಿಗಳಾದಾಗ ಸಫಲತೆಯನ್ನು ಪಡೆಯುತ್ತೀರಿ. ಈಗ ಬಹಳ ಸಮಯವಾಗಿದೆ, ಇನ್ನೇನನ್ನಾದರೂ ಹೇಳುವುದಿದೆಯೇ? ಸೂಕ್ಷ್ಮವತನದಲ್ಲಿ ಕುಳಿತುಕೊಂಡರೂ ಮಕ್ಕಳ ದಿನಚರಿಯನ್ನು, ಪ್ರತಿಯೊಬ್ಬ ಮಗುವಿನ ಚಾರ್ಟನ್ನು ಈಗ ಹೆಚ್ಚು ಸ್ಪಷ್ಟ ರೂಪದಲ್ಲಿ ನೋಡಬಲ್ಲೆವು. ಆದ್ದರಿಂದ ಎಲ್ಲರ ಫಲಿತಾಂಶವನ್ನು ನೋಡುತ್ತಿರುತ್ತೇವೆ.

ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾದಷ್ಟು, ಆ ಅವ್ಯಕ್ತ ಸ್ಥಿತಿಯಲ್ಲಿ ಕರ್ಮೇಂದ್ರಿಯಗಳಿಂದ ಶ್ರೀಮತದ ಅನುಸಾರವಾಗಿ ಕರ್ಮಗಳಾಗುವವು. ಈ ಅನುಭವವನ್ನು ಮಕ್ಕಳು ಪಡೆಯುವರು. ಈಗ ತಮ್ಮ ಅವ್ಯಕ್ತ ಸ್ಥಿತಿಯ ಆಧಾರದಿಂದ ಶ್ರೀಮತದಂತೆ ಕರ್ಮಗಳನ್ನು ಮಾಡಬೇಕು ತಂದೆಯ ಸ್ನೇಹ ಯಾವುದರೊಂದಿಗೆ ಇದೆಯೋ ಅದರೊಂದಿಗೆ ಮಾತ್ರ ಸ್ನೇಹವನ್ನು ಇಟ್ಟುಕೊಳ್ಳುವುದೇ ತಮ್ಮನ್ನು ಸೌಭಾಗ್ಯಶಾಲಿಗಳನ್ನಾಗಿ ಮಾಡಿಕೊಳ್ಳುವುದಾಗಿದೆ. ರೋಮ-ರೋಮಗಳಲ್ಲಿ ಯಾರೊಂದಿಗೆ ಸ್ನೇಹವಿತ್ತು? ಐದು ತತ್ವಗಳೊಂದಿಗಲ್ಲ, ಗುಣಗಳೊಂದಿಗೆ ಸ್ನೇಹವಿತ್ತು. ಸ್ನೇಹವಿತ್ತು ಅಲ್ಲ ಸ್ನೇಹವಿದೆ ಹಾಗೂ ಮುಂದೆಯೂ ಇರುವುದು. ಭವಿಷ್ಯದ ಹೊಸ ಪ್ರಪಂಚ ಬರುವವರೆಗೂ ಈ ಅಖಂಡ ಸ್ನೇಹವಿರುವುದು. ಸ್ನೇಹ ಆತ್ಮದೊಂದಿಗೆ ಮತ್ತು ಕರ್ತವ್ಯದೊಂದಿಗೆ ಇದೆ. ಹಾಗಾದರೆ ಶರೀರವೇನು! ಅಂತ್ಯದವರೆಗೂ ಜೊತೆಗಾರರು ಆಗಿರುವ ತಂದೆಯೊಂದಿಗೆ ಸ್ನೇಹವಿರುವವರು ಅಂತ್ಯದವರೆಗೆ ಸ್ಥಾಪನೆಯ ಕಾರ್ಯದಲ್ಲಿ ಸಹಯೋಗಿಗಳಾಗುವರು. ಆದ್ದರಿಂದ ಸ್ನೇಹಿಗಳಾಗುವ ಪ್ರಯತ್ನ ಮಾಡಿ. ಮಾಯೆ ಹೇಗಾದರೂ ಬರಲಿ, ಮಾಯಾಜೀತರಾಗಬೇಕು. ಬ್ಯಾಡ್ಜ್ ಧರಿಸುವಂತೆ ಮಸ್ತಕದಲ್ಲಿ ಈ ವಿಜಯದ ಬ್ಯಾಡ್ಜನ್ನು ಧರಿಸಿ. ಮಧುಬನದ ನಕ್ಷೆ ಇಡೀ ಜಗತ್ತಿನ ಮುಂದೆ ಸಂಗ್ರಹಾಲಯದ ರೂಪದಲ್ಲಿ ಇರಬೇಕು. ಅವಿನಾಶಿ ಭಂಡಾರವಿದೆ, ಇದು ಇನ್ನೂ ಹೆಚ್ಚು ಪ್ರತ್ಯಕ್ಷವಾಗಬೇಕು. ಎಲ್ಲಾ ಮಕ್ಕಳು ಹೇಗೆ ಪತ್ರ ಬರೆಯುತ್ತಿದ್ದರೋ ಹಾಗೆಯೇ ಬರೆಯುತ್ತಾ ಇರಿ. ಹೇಗೆ ಸಲಹೆಗಳನ್ನು ಪಡೆಯುತ್ತಿದ್ದರೊ ಹಾಗೆಯೇ ಪಡೆಯಿರಿ. ಶರೀರದ ಮಾತು ಬೇರೆಯಾಗಿತ್ತು, ಸೇವೆ ಅದೇ ಆಗಿದೆ. ಆದ್ದರಿಂದ ಯಾವುದೇ ವಿಷಯವಿರಲಿ ಮಧುಬನಕೆ ಬರೆಯುತ್ತಿರಿ. ತಮ್ಮ ಸಂಪೂರ್ಣ ಸಂಬಂಧವಿರಲಿ. ಬೇರೆಯವರಿಗೂ ತಮ್ಮ ಸ್ಥಿತಿಯ ಪ್ರಮಾಣವನ್ನು ನೀಡಿ. ತಮ್ಮನ್ನು ನೋಡಿ ಬೇರೆಯವರು ಹಾಗೆಯೇ ಮಾಡುವರು.

**ವಿದಾಯದ ಸಮಯದಲ್ಲಿ**,

ನಾಟಕದ ದೃಶ್ಯದಲ್ಲಿ ಏನಾದರೂ ಒಂದು ಗುಪ್ತ ರಹಸ್ಯವಿದೆ ಎಂಬುದನ್ನು ಮಕ್ಕಳು ಅರಿತಿದ್ದೀರಿ. ಯಾವ ರಹಸ್ಯ ಅಡಗಿದೆ ಎಂಬುದನ್ನು ಸಮಯಾನುಸಾರ ತಿಳಿಸುವೆವು. ಆಕಾಶದಲ್ಲಿರುವ ನಕ್ಷತ್ರಗಳು ತಮ್ಮ ಸ್ಮಾರಕಗಳಾಗಿವೆ, ಈ ಭೂಮಿಯ

ಚೈತನ್ಯ ನಕ್ಷತ್ರಗಳಾದ ತಾವು ಮಕ್ಕಳು ಯಾರ ಶ್ರೀಮತದಂತೆ ನಡೆಯುತ್ತೀರಿ ಎಂಬುದನ್ನು ಈ ಜಗತ್ತಿನ ಜನ ತಮ್ಮ ಕಣ್ಣುಗಳಿಂದ ನೋಡುತ್ತಾರೆ.